**ಕರ್ನಾಟಕ ಸರ್ಕಾರ**

ಸಂ:ಗ್ರಾಅಪ 40 ಗ್ರಾನೀಸ (2) 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:22.12.2011

Urgent please / TODAY

**ಇವರಿಂದ:**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**
**1. ಮುಖ್ಯ ಇಂಜಿನಿಯರ್,**
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಸಂಕೀರ್ಣ,
ನಂ.55, 4ನೇ ಮಹಡಿ, ಅಭಯ ಸಂಕೀರ್ಣ,
ಎಸಾಲ್ಡಾರ್ ರಸ್ತೆ, ಶೇಷಾದ್ರಿಪುರಂ, **ಬೆಂಗಳೂರು-20.**

**2. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.**

ಮಾನ್ಯರೆ,

ವಿಷಯ: 2011-12ರ ಸಾಲಿನಲ್ಲಿ ಎಲ್ಲಾ NRDWP ಘಟಕಗಳಡಿ ಶೇಕಡ 60% ಪ್ರಗತಿ ದಾಖಲಿಸುವ ಕುರಿತು.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 40 ಗ್ರಾನೀಸ(2) 11, ದಿ:26.11.2011.

—

ಮೇಲ್ಕಂಡ ವಿಷಯ ಕುರಿತಂತೆ ಈಗಾಗಲೇ ಉಲ್ಲೇಖಿತ **ತುರ್ತು ಸಂದೇಶದಡಿ** ಅನುಮೋದಿತ ಕ್ರಿಯಾ ಯೋಜನೆಯನ್ವಯ ಕಾಮಗಾರಿಗಳ ಪ್ರಗತಿ ತೀವ್ರಗೊಳಿಸಿ, RTGS ಮುಖೇನ ಬಿಲ್ ಪಾವತಿಯನ್ನು ಜಾಗ್ರತೆಯಾಗಿ ಮಾಡಿ, ಪ್ರಸಕ್ತ ಸಾಲಿಗೆ IMISನಲ್ಲಿ ಆಯಾ ಘಟಕಾವಾರು ರಾಜ್ಯ ಮತ್ತು ಕೇಂದ್ರ ವಲಯಗಳಡಿ ಪ್ರತಿಬಿಂಬಿಸಿರುವ OB ಮತ್ತು ಬಿಡುಗಡೆಯಾದ ಅನುದಾನ ಸೇರಿ ಶೇಕಡ 60-75ರಷ್ಟು ಪ್ರಗತಿ ಸಾಧಿಸಲು ಈಗಾಗಲೇ ಸೂಚಿಸಲಾಗಿದೆ. ರಾಜ್ಯವು ಪ್ರಗತಿ ಸಾಧಿಸುವಾಗ ಆಯಾ ಯೋಜನೆಗೆ / ಕಾಮಾಗಾರಿಗಳಿಗೆ ಸಂಬಂಧಿಸಿದಂತೆ RTGS ಮುಖೇನ ಅನುಷ್ಠಾನ ಸಂಸ್ಥೆಗೆ (KRIDL / KUWSDB / PRED/ GP/TP) ನೀಡಿರುವ ಅನುದಾನ ಸಮರ್ಪಕವಾಗಿ ಆರ್ಥಿಕ ಶಿಸ್ತಿನನ್ವಯ ವಿನಿಯೋಗವಾಗಿದೆಯೆಂದು ಖಾತ್ರಿಪಡಿಸಿಕೊಳ್ಳಲು ಕೋರಿದೆ.

O&M ಬಾಬ್ತಿಗೆ ಬಿಡುಗಡೆಯಾಗಿರುವ ಅನುದಾನವನ್ನು ತಕ್ಷಣ ಆಯಾ GPಗಳಿಗೆ RTGS ಮುಖೇನ **ಇಂದೇ** ವರ್ಗಾಯಿಸಬೇಕು. ಅಂತೆಯೇ, **MVS** ಯೋಜನೆ ಸೇರಿ O&M ಬಾಬ್ತಿಗೆ ಬಿಡುಗಡೆಯಾಗಿರುವ ಅನುದಾನವನ್ನು ಉಸ್ತುವಾರಿ ಸಂಸ್ಥೆಗಳಿಗೆ ಅಥವಾ ಸದರಿ ಬಾಬ್ತಿಗೆ ವಹಿಸಿರುವ

ಹೊರಗುತ್ತಿಗೆ ಸಂಬಂಧ ಆಯಾ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಪ್ರತ್ಯೇಕ Corps Fund ಖಾತೆ ತೆಗೆದು CE/PRED ಸಮನ್ವಯದಲ್ಲಿ ಅನುಮೋದಿತ ToRನಂತೆ outsource ಮುಖೇನ O&M ವ್ಯವಸ್ಥೆ ನೋಡಿಕೊಳ್ಳಲು ಕ್ರಮವಹಿಸುವುದು. NRDWP-Support Activityಗೆ ಸಂಬಂಧಿಸಿದಂತೆ ಬಿಡುಗಡೆಯಾಗಿರುವ ಅನುದಾನವನ್ನು ಜಾಗ್ರತೆಯಾಗಿ ವಿನಿಯೋಗಿಸಿ, ಸಂಪೂರ್ಣ ವೆಚ್ಚವಾಗಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.

ಮೇಲ್ಕಂಡ ಸನ್ನಿವೇಶಗಳಲ್ಲಿ ಆಯಾ ಘಟಕಾವಾರು ಪ್ರತಿ ಜಿಲ್ಲಾ ಪಂಚಾಯತ್‌ನಿಂದ OB ಮತ್ತು ಪ್ರಸಕ್ತ ಸಾಲಿಗೆ ಬಿಡುಗಡೆಯಾದ ಅನುದಾನ ಸೇರಿ 75% ವೆಚ್ಚವಾಗಿರುವುದನ್ನು ದಾಖಲಿಸಲು ಜಾಗ್ರತೆಯಾಗಿ ಕ್ರಮವಹಿಸಿ, ವಾಸ್ತವಿಕವಾಗಿ ಘಟಕಾವಾರು ಆಗಿರುವ ವೆಚ್ಚದ UCsಗಳನ್ನು CE/PREDಗೆ ಕಳುಹಿಸುವುದು. ಅಂತೆಯೇ, ಸದರಿ ಮಾಹಿತಿಯನ್ನು IMISನಲ್ಲಿ ಪ್ರತಿಬಿಂಬಿತವಾಗಿರುವುದನ್ನು ತಕ್ಷಣ ಖಾತ್ರಿಪಡಿಕೊಳ್ಳಲು ಕೋರಿದೆ. ಇಲ್ಲವಾದಲ್ಲಿ, ಕೇಂದ್ರ ಸರ್ಕಾರದಿಂದ ಬರುವ ಅನುದಾನದಲ್ಲಿ ಕಡಿತವಾಗಲಿದೆ ಹಾಗೂ ಪ್ರಸಕ್ತ ಸಾಲಿನಲ್ಲಿ ಆಯಾ ಜಿಲ್ಲಾ ಪಂಚಾಯತಿಗೆ ಹಾಗೂ ರಾಜ್ಯಕ್ಕೆ ಬರಬೇಕಾದ ಅನುದಾನದಲ್ಲಿ ತೊಡಕಾಗಲಿದೆ. ಈ ಎಲ್ಲಾ ಪರಿಕ್ರಮಗಳು **ದಿ:26.12.2011ರೊಳಗೆ** ಪೂರ್ಣಗೊಳ್ಳುವಂತೆ ನೋಡಿಕೊಳ್ಳುವ ಜವಾಬ್ದಾರಿ ಆಯಾ ಜಿಲ್ಲಾ ಪಂಚಾಯತ್‌ನ ಮುಖ್ಯಸ್ಥರು / CAO / PREDಗಳಿಗೆ ಸೇರಿದೆ. ಅಂತೆಯೇ, ಈ ವಿಷಯದಲ್ಲಿ ದಯವಿಟ್ಟು ಜಾಗ್ರತೆಯಾಗಿ ಮುಂದಿನ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

ತಮ್ಮ ವಿಶ್ವಾಸಿ,

(ರಾಮಕೃಷ್ಣ),
ಸರ್ಕಾರದ ಅಧೀನ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಯನ್ನು ಮಾಹಿತಿಗಾಗಿ ಮತ್ತು ತುರ್ತು ಕ್ರಮಕ್ಕಾಗಿ ಕೆಳಕಂಡಂತೆ ರವಾನಿಸಿದೆ:**

1. ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು.
2. ರಾಜ್ಯದ ಎಲ್ಲಾ (8) ಅಧೀಕ್ಷಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವೃತ್ತ, ಬೆಂಗಳೂರು.
3. ರಾಜ್ಯದ ಎಲ್ಲಾ (38) ಕಾರ್ಯಪಾಲಕ ಇಂಜಿನಿಯರ್‌ಗಳು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳು, ಮತ್ತು
4. ರಾಜ್ಯದ ಎಲ್ಲಾ (176) ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿವಾಹಕ ಅಧಿಕಾರಿಗಳು.